

# ಮಗಳಿಗೆ ದಸರಾ ವೈಭವ ತೋರಿಸಿದ ಗಂಗಾ

ತಾವಿಬ್ಬರೂ ನೆಮ್ಮದಿಯಾಗಿರಲು ಮುಂಬಯಿ ಅತ್ಯುತ್ತಮ ಜಾಗ ಎಂದು ಗಂಗೆ ಸೂಚಿಸಿದ್ದಳು. ಅವಳ ಊರಿನ ಜನ ಮುಂಬೈ ಜೀವನದ ಬಗ್ಗೆ ಬೇಕಾದಷ್ಟು ವಿಷಯ ಹೇಳುತ್ತಿದ್ದರು. ಯಾರ ಸಂಸಾರ ಹೇಗೆ ಇದೆ ಎಂದು ಯಾರೂ ಹೆಚ್ಚು ಕುತೂಹಲ ತೋರದಿರುವುದರಿಂದ ಅದು ತಮ್ಮ ರೀತಿ ದಂಪತಿಗಳಿಗೆ ಹೇಳಿ ಮಾಡಿಸಿದ ಊರಾಗಿತ್ತು. ಆ ಊರಲ್ಲಿ ಅನೇಕ ಮಂದಿ ಎಲ್ಲೆಲ್ಲಿಂದಲೊ ಬಂದವರು ಆದ್ದರಿಂದ ಅವರವರ ಪಾಡು ಅವರವರಿಗೇ ಇರುತ್ತದೆ. ಮುಖ್ಯವಾಗಿ ಅವರವರ ವೃತ್ತಿ, ಕಾರ್ಯ ಚೆನ್ನಾಗಿ ಮಾಡಿದರೆ ಸಾಕು. ಸಂಪಾದನೆ ಚೆನ್ನಾಗಿ ಮಾಡುತ್ತ ಹಾಯಾಗಿ ಜೀವನ ಮಾಡಬಹುದು ಎಂದು ಪ್ರಸಾದನಿಗೂ ಅನ್ನಿಸಿತು. ಆದ್ದರಿಂದ ತಮ್ಮ ಜಾತಿ ವ್ಯತ್ಯಾಸ, ಸಂಸ್ಕಾರದ ಅಂತರ, ಕೊನೆಗೆ ಭಾಷಾ